ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹುಕ್ಕೇರಿ

ಸಂ: ಎ2/ಮಾ.ನ./ಶಂಕಶಾಚಿ/2010-11 661 ದಿನಾಂಕ: 19/08/2010

-:ಜ್ಞಾಪನ:-

ವಿಷಯ: ಶಂಕರಲಿಂಗ ಕನ್ನಡ ಮಾಧ್ಯಮ ಶಾಲೆ ಚಿಕಾಲಗುಡ್ಡ ಶಾಲೆಯ 1 ರಿಂದ 5 ನೇ ತರಗತಿ ಮಾನ್ಯತೆ ನವೀಕರಣ ಕುರಿತು.

ಉಲ್ಲೇಖ: ಸದರಿಯವರ ಪ್ರಸ್ತಾವಣೆ ದಿನಾಂಕ: - /08/2010

<<<<>>>>

ಮೇಲಿನ ಉಲ್ಲೇಖಿತ ಪತ್ರದಂತೆ ಶಂಕರಲಿಂಗ ಕನ್ನಡ ಮಾಧ್ಯಮ ಶಾಲೆ ಚಿಕಾಲಗುಡ್ಡ ಶಾಲೆಯ 1 ರಿಂದ 5 ನೇ ತರಗತಿಗಳ ಮಾನ್ಯತೆ ನವೀಕರಣ ಪ್ರಸ್ತಾವಣೆಯನ್ನು ಪರಿಶೀಲಿಸಿ ಸದರಿ ಸಂಸ್ಥೆಯವರಿಗೆ 2008-09 ನೇ ಸಾಲಿನಲ್ಲಿ 1 ನೇ ತರಗತಿ ಪ್ರಾರಂಭಿಸಲು ಅನುಮತಿ ದೊರೆತ್ತಿದ್ದು ಅದರಂತೆ ಸ್ವಾಬಾವಿಕ ಬೆಳವಣಿಗೆಯಂತೆ 5 ನೇ ತರಗತಿ 2012-13 ನೇ ಸಾಲಿನಲ್ಲಿ ಪ್ರಾರಂಭವಾಗುವುದು. ಈ ಕೆಳಗಿನ ವಿಭಾಗಗಳಿಗೆ ತಾತ್ಕಾಲಿಕ ಮಾನ್ಯತೆಯನ್ನು ಈ ಕೆಳಗೆ ಕಾಣಿಸಿದ ಷರತ್ತುಗಳಿಗೊಳಪಟ್ಟು ನವೀಕರಿಸಲಾಗಿದೆ.

| |
|---|
| ಸನ್ **2010-11** ರಿಂದ **2012-13** ನೇ ಸಾಲಿಗೆ 1 ರಿಂದ 5 ನೇ ತರಗತಿಯ ಕನ್ನಡ ಮಾಧ್ಯಮದ ಒಂದೊಂದು ವಿಭಾಗಗಳಿಗೆ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನವೀಕರಿಸಲಾಗಿದೆ. |

ಷರತ್ತುಗಳು:-

1. ಅನುದಾನ ಸಂಹಿತೆಯ 3 ನೇ ನಿಯಮ (9){ಅ} ದಲ್ಲಿ ಸೂಚಿಸಿದ ನಮೂನೆಯಲ್ಲಿ ಸ್ವಂತ ಶಾಲಾ ಕಟ್ಟಡವನ್ನು ಮುಂದಿನ ಸಾಲಿನ ಮಾನ್ಯತೆ ನವೀಕರಣದ ಮುಂಚಿತವಾಗಿ ಒದಗಿಸಲು ಕ್ರಮ ತಗೆದುಕೊಳ್ಳುವುದು.

2. ಪ್ರಾಥಮಿಕ ಶಾಲೆ ಅನುದಾನ ಸಂಹಿತೆಯ ನಿಯಮದಲ್ಲಿ ಸೂಚಿಸಿದಂತೆ ಕನಿಷ್ಠ 5 ಎಕರೆ ಆಟದ ಮೈದಾನವನ್ನು ಮುಂದಿನ ಮಾನ್ಯತೆ ನವೀಕರಣ ಮುಂಚಿತವಾಗಿ ಒದಗಿಸುವುದು.

3. ಪಾಠೋಪಕರಣ/ಪಿಠೋಪಕರಣ/ವಿಜ್ಞಾನ ಉಪಕರಣ ಹಾಗೂ ಗ್ರಂಥಾಲಯ ಪುಸ್ತಕಗಳನ್ನು ಹಾಗೂ ವರ್ಗ ಮತ್ತು ವಿದ್ಯಾರ್ಥಿಗಳ ಪ್ರಮಾಣದಂತೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು.

4. ಆಡಳಿತ ಮಂಡಳಿಯವರು ಸರ್ಕಾರದಿಂದ ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಿದ ನಿಯಮ ಹಾಗೂ ಸುತ್ತೋಲೆಗಳನ್ನು ಪಾಲಿಸುವುದು.

5. ರಾಷ್ಟ್ರೀಯ ಶಾಲಾ ಕಟ್ಟಡ ಸುರಕ್ಷತಾ ನಿಯಮಗಳನ್ನು ಪಾಲಿಸಿ ಶಾಲೆಯಲ್ಲಿ ಅಗ್ನಿನಂದಕ ಉಪಕರಣಗಳನ್ನೂ ಅಳವಡಿಸುವದು ಕಡ್ಡಾಯವಾಗಿದೆ. ಒದಗಿಸಿದ ಕುರಿತು ದಾಖಲೆಗಳು ಈ ಕಚೇರಿಗೆ ಸಲ್ಲಿಸುವುದು.

6. ಶಾಲಾ ಸಿಬ್ಬಂಧಿಗಳಿಗೆ ಸರ್ಕಾರಿ ಸುತ್ತೋಲೆಯಲ್ಲಿ ಕಾಣಿಸಿದಂತೆ ಸೇವಾ ಸೌಲಭ್ಯ ನಿಡುವ ಹಾಗೂ ನಿಶ್ಚ ವೇತನವನ್ನು ಅವರವರ ಬ್ಯಾಂಕ ಖಾತೆಗಳಿಗೆ ಜಮೇ ಮಾಡಿದ ಕುರಿತು ದಾಖಲೆಗಳು ಸಲ್ಲಿಸುವ ಷರತ್ತಿಗೊಳಪಟ್ಟಿರುತ್ತದೆ.

7. ಪ್ರಾಥಮಿಕ ಶಾಲೆ ಅನುದಾನ ಸಂಹಿತೆಯ ನಿಯಮ12(2) ರನ್ವಯ ಇನ್ನೂ ಮುಂದಿನ ಮನ್ನಣೆ ನವೀಕರಣ ಪ್ರಸ್ತಾವಣೆಯನ್ನು ಶಾಲಾ ವರ್ಷ ಪ್ರಾರಂಭವಾದ ವರ್ಷದ ಆಗಸ್ಟ 1 ರ ಮುಂಚಿತವಾಗಿ ಈ ಕಾರ್ಯಾಲಯಕ್ಕೆ ಮಾಹಿತಿಯೊಂದಿಗೆ ತಪ್ಪದೆ ಸಲ್ಲಿಸುವುದು ಇದಕ್ಕೆ ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯವರೆ ಜವಾಬ್ದಾರರಾಗುವರು.

8. ಆಡಳಿತ ಮಂಡಳಿ ಕಳೆದ ಮಾರ್ಚ ಕೊನೆಯೊಳಗಿನ ಆಡಿಟ ವರದಿಯನ್ನು ಈ ಆದೇಶ ಮುಟ್ಟಿದ ತಿಂಗಳೊಳಗೆ ಸಂಸ್ಥೆಗಳ ನೊಂದಣಿ ಅಧಿಕಾರಿಗಳಿಗೆ ಸಲ್ಲಿಸಿ ಅದರ ಒಂದು ಪ್ರತಿಯನ್ನು ನೋಂದಣಿ ಅಂಚೆ ಮೂಲಕ ಈ ಕಾರ್ಯಾಲಯಕ್ಕೆ ಪತ್ರಾಂಕಿತ ವ್ಯವಸ್ಥಾಪಕರ ವೈಯಕ್ತಿಕ ವಿಳಾಸಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.

9. ಈ ಆದೇಶವು ಮೇಲಾಧಿಕಾರಿಗಳ ಆಕ್ಷೇಪಣೆಗಳಿಗೆ ಒಳಪಟ್ಟಿರುತ್ತದೆ.

10. ವಿಭಾಗ/ವರ್ಗಗಳಲ್ಲಿನ ದಾಖಲಾತಿ/ಹಾಜರಾತಿ ಕಡಿಮೆಯಾದಲ್ಲಿ ಈ ಆದೇಶವು ತನ್ನಿಂದತಾನೇ ರದ್ದಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿ
ಹುಕ್ಕೇರಿ ವಲಯ

ಗೆ-
ಮುಖ್ಯಾಧ್ಯಾಪಕರು/ಅಧ್ಯಕ್ಷರು,
ಶಂಕರಲಿಂಗ ಕನ್ನಡ ಮಾಧ್ಯಮ ಶಾಲೆ ಚಿಕಾಲಗುಡ್ಡ

ಪ್ರಧಾನ ಗುರುಗಳು

ಅಧ್ಯಕ್ಷರು

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹುಕ್ಕೇರಿ

ಸಂ: ಶ2/ಮಾ.ನ./ಹಿ.ಶಿ.ಮಂಸಂ/2011-12 1152 ದಿನಾಂಕ: 31/01/2012

–::ಜ್ಞಾಪನ::–

**ವಿಷಯ :** ಶ್ರೀ ಶಂಕರಲಿಂಗ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಚಿಕಾಲಗುಡ್ಡ ಶಾಲೆಯ 1 ರಿಂದ 6 ತರಗತಿಗೆ ಮಾನ್ಯತೆ ನವೀಕರಣ ಕುರಿತು.

**ಉಲ್ಲೇಖ :** ಸದರಿಯವರ ಪ್ರಸ್ತಾವಣೆ ದಿನಾಂಕ: – 2 /09/2011

ಮೇಲಿನ ಉಲ್ಲೇಖಿತ ಪತ್ರದಂತೆ ಶ್ರೀ ಶಂಕರಲಿಂಗ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಚಿಕಾಲಗುಡ್ಡ ಶಾಲೆಯ 1 ರಿಂದ 6 ನೇ ತರಗತಿಗಳಿಗೆ ಮಾನ್ಯತೆ ನವೀಕರಣ ಪ್ರಸ್ತಾವಣೆಯನ್ನು ಪರಿಶೀಲಿಸಿ ಈ ಕೆಳಗಿನ ವಿಭಾಗಗಳಿಗೆ ತಾತ್ಕಾಲಿಕ ಮಾನ್ಯತೆಯನ್ನು ಈ ಕೆಳಗೆ ಕಾಣಿಸಿದ ಷರತ್ತುಗಳಿಗೊಳಪಟ್ಟು ನವೀಕರಿಸಲಾಗಿದೆ.

> ಸನ್ 2011–12 ನೇ ಸಾಲಿಗೆ 1 ರಿಂದ 6 ನೇ ತರಗತಿಯ ಕನ್ನಡ ಮಾಧ್ಯಮದ ಒಂದೊಂದು ವಿಭಾಗಗಳಿಗೆ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನವೀಕರಿಸಲಾಗಿದೆ.

**ಷರತ್ತುಗಳು:–**

- ಅನುದಾನ ಸಂಹಿತೆಯ 3 ನೇ ನಿಯಮ (9)(ಅ) ದಲ್ಲಿ ಸೂಚಿಸಿದ ನಮೂನೆಯಲ್ಲಿ ಸ್ವಂತ ಶಾಲಾ ಕಟ್ಟಡವನ್ನು ಮುಂದಿನ ಸಾಲಿನ ಮಾನ್ಯತೆ ನವೀಕರಣದ ಮುಂಚಿತವಾಗಿ ಒದಗಿಸಲು ಕ್ರಮ ತಗೆದುಕೊಳ್ಳುವುದು.
- ಪ್ರಾಥಮಿಕ ಶಾಲೆ ಅನುದಾನ ಸಂಹಿತೆಯ ನಿಯಮದಲ್ಲಿ ಸೂಚಿಸಿದಂತೆ ಕನಿಷ್ಠ 5 ಎಕರೆ ಆಟದ ಮೈದಾನವನ್ನು ಮುಂದಿನ ಮಾನ್ಯತೆ ನವೀಕರಣ ಮುಂಚಿತವಾಗಿ ಒದಗಿಸುವುದು.
- ಪಾಠೋಪಕರಣ/ಪೀಠೋಪಕರಣ/ವಿಜ್ಞಾನ ಉಪಕರಣ ಹಾಗೂ ಗ್ರಂಥಾಲಯ ಪುಸ್ತಕಗಳನ್ನು ಹಾಗೂ ವರ್ಗ ಮತ್ತು ವಿದ್ಯಾರ್ಥಿಗಳ ಪ್ರಮಾಣದಂತೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು.
- ಆಡಳಿತ ಮಂಡಳಿಯವರು ಸರ್ಕಾರದಿಂದ ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಿದ ನಿಯಮ ಹಾಗೂ ಸುತ್ತೋಲೆಗಳನ್ನು ಪಾಲಿಸುವುದು.
- ಪ್ರಾಥಮಿಕ ಶಾಲೆ ಅನುದಾನ ಸಂಹಿತೆಯ ನಿಯಮ 12 (2) ರನ್ವಯ ಇನ್ನೂ ಮುಂದಿನ ಮಾನ್ಯತೆ ನವೀಕರಣ ಪ್ರಸ್ತಾವಣೆಯನ್ನು ಶಾಲಾ ವರ್ಷ ಪ್ರಾರಂಭವಾದ ವರ್ಷದ ಆಗಸ್ಟ 1 ರ ಮುಂಚಿತವಾಗಿ ಈ ಕಾರ್ಯಾಲಯಕ್ಕೆ ಮಾಹಿತಿಯೊಂದಿಗೆ ತಪ್ಪದೆ ಸಲ್ಲಿಸುವುದು ಇದಕ್ಕೆ ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯವರೆ ಜವಾಬ್ದಾರರಾಗುವರು.
- ಆಡಳಿತ ಮಂಡಳಿ ಕಳೆದ ಮಾರ್ಚ ಕೊನೆಯೊಳಗಿನ ಆಡಿಟ ವರದಿಯನ್ನು ಈ ಆದೇಶ ಮುಟ್ಟಿದ ತಿಂಗಳೊಳಗೆ ಸಂಸ್ಥೆಗಳ ನೊಂದಣಿ ಅಧಿಕಾರಿಗಳಿಗೆ ಸಲ್ಲಿಸಿ ಅದರ ಒಂದು ಪ್ರತಿಯನ್ನು ನೋಂದಣಿ ಅಂಚೆ ಮೂಲಕ ಈ ಕಾರ್ಯಾಲಯಕ್ಕೆ ಪತ್ರಾಂಕಿತ ವ್ಯವಸ್ಥಾಪಕರ ವೈಯಕ್ತಿಕ ವಿಳಾಸಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.
- ಈ ಆದೇಶವು ಮೇಲಾಧಿಕಾರಿಗಳ ಆಕ್ಷೇಪಣೆಗಳಿಗೆ ಒಳಪಟ್ಟಿರುತ್ತದೆ.
- ವಿಭಾಗ/ವರ್ಗಗಳಲ್ಲಿನ ದಾಖಲಾತಿ/ಹಾಜರಾತಿ ಕಡಿಮೆಯಾದಲ್ಲಿ ಈ ಆದೇಶವು ತನ್ನಿಂದತಾನೇ ರದ್ದಾಗುವುದು.
- ಶಾಲಾ ರಾಷ್ಟ್ರೀಯ ಕಟ್ಟಡ ಸುರಕ್ಷತಾ ನಿಯಮದಂತೆ ಶಾಲೆಯಲ್ಲಿ ಅಗ್ನಿನಂದಕ ಉಪಕರಣ ಅಳವಡಿಸಿ ಕಚೇರಿಗೆ ಭಾವಚಿತ್ರದೊಂದಿಗೆ ವರದಿ ಸಲ್ಲಿಸುವುದು. ಹಾಗೂ ಸರ್ಕಾರಿ ಆದೇಶದಂತೆ ರೀತಾ ಸಿಬ್ಬಂಧಿಗಳಿಗೆ ನಿಯಮಾನುಸಾರ ಕನಿಷ್ಠ ವೇತನ ಹಾಗೂ ಸೇವಾ ಸೌಲಭ್ಯ ಒದಗಿಸಿದ ಕುರಿತು ಕಾಲಕಾಲಕ್ಕೆ ದಾಖಲೆಗಳಸಹಿತ ವರದಿ ಕಚೇರಿಗೆ ಸಲ್ಲಿಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿ
ಹುಕ್ಕೇರಿ ವಲಯ

ಅಧ್ಯಕ್ಷರು
ಕ.ಮ. ಪ್ರಾಥಮಿಕ ಶಾಲೆ ಚಿಕಾಲಗುಡ್ಡ ತಾ: ಹುಕ್ಕೇರಿ

ಪ್ರಧಾನ ಗುರುಗಳು

ಅಧ್ಯಕ್ಷರು
ಶ್ರೀ ಶಂಕರಲಿಂಗ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಚಿಕಾಲಗುಡ್ಡ
ತಾ. ಹುಕ್ಕೇರಿ, ಜಿ. ಬೆಳಗಾವಿ.

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹುಕ್ಕೇರಿ

ಸಂಖ್ಯೆ : ಎ2/ಪೂಪ್ರಾ ಶಾಲೆ/ನೊಂದಣಿ/ಅನುಮತಿ/ 122 /14–15 ದಿನಾಂಕ: 07/01/2015

**ನಮೂನೆ–2**

[ನಿಯಮ 3ರ ಉಪನಿಯಮ 5(ಬಿ)]

ಪ್ರಮಾಣ ಪತ್ರ ಸಂಖ್ಯೆ : 1/14–15

ಶ್ರೀ ಶಂಕರಲಿಂಗ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಚಿಕಾಲಗುಡ್ಡ ಇವರ ಗೌವರನಿಂಗ್ ಕೌನ್ಸಿಲ್‌ನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983(ಕರ್ನಾಟಕ ಆ್ಯಕ್ಟ –I–1995) ಸೆಕ್ಷನ್ 31 ರಂತೆ ಈ ದಿನ 07/01/2014 ರಂದು ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ0ಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. ಕ್ರಮ ಸಂಖ್ಯೆ | : | 1/14–15 |
| 2. ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ | : | ಶ್ರೀ ಶಂಕರಲಿಂಗ ಪೂರ್ವ ಪ್ರಾಥಮಿಕ ಶಾಲೆ (ಸಿಬಿಎಸ್‌ಸಿ) ಚಿಕಾಲಗುಡ್ಡ ತಾ: ಹುಕ್ಕೇರಿ |
| 3 ಅನುಮತಿ ನೀಡಿದ ತರಗತಿ | : | ಪೂರ್ವ ಪ್ರಾಥಮಿಕ ಶಾಲೆ **(ಶಾಶ್ವತ ಅನುದಾನ ರಹಿತ)** (ಯು.ಕೆ.ಜಿ ಮತ್ತು ಎಲ್.ಕೆ.ಜಿ) |
| 4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | : | 2015–16 |
| 5. ಅನುಮತಿ ನೀಡಿದ ಮಾಧ್ಯಮ | : | ಕನ್ನಡ |
| 6. ನೊಂದಣಿ/ಸಂಸ್ಕರಣಾ ಶುಲ್ಕ ಪಾವತಿ ಮಾಡಿರುವುದು | : | 25000–00 10000–00 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ : 1/14–15 ಪುಟ.ಸಂ. 3 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

**<u>ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.</u>**

1. ಈ ನೋಂದಾವಣೆಯ ನಿಯಮ 3ರ(4)ಮತ್ತುಅ(5) ಕ್ಕೆ ಒಳಪಟ್ಟಿರುತ್ತದೆ.
2. ಗೌವರನಿಂಗ ಕೌನ್ಸಿಲ್‌ರವರು 4(4) ರಲ್ಲಿ ತಿಳಿಸುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ,ವಿಸ್ತೀರ್ಣ,ಕಟ್ಟಡ, ಪಾಠೋಪಕರಣ,ಪಿಠೋಪಕರಣಗಳು, ಸಿಬ್ಬಂದಿವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಈ ಶಿಕ್ಷಣ ಸಂಸ್ಥೆಗೆ ಪೂರ್ವ ಪ್ರಾಥಮಿಕ ಶಾಲೆಯನ್ನು ತೆರೆಯಲು ನೋಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶ ಸಂಖ್ಯೆ ಇಡಿ 14 ಎಸ್.ಇ.ಎಸ್/98 ದಿನಾಂಕ: 17–3–99 ರನ್ವಯ ಪರಿಶಿಲಿಸಲಾಗಿದೆ.
5. ಸದರಿ ಶಿಕ್ಷಣ ಸಂಸ್ಥಯು ಯಾವುದೇ ಸಂದರ್ಬದಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೇ ಹೆಚ್ಚಿಗೆ ವಿಭಾಗಗಳನ್ನು ತರೆಯುವಂತಿಲ್ಲ.
6. ಶಾಲೆಯನ್ನು ಮಂಜುರು ಮಾಡಿರುವ ಮಾಧ್ಯಮದಲ್ಲಿ ಮಾತ್ರ ತೆರೆಯತಕ್ಕದ್ದು.

13 ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆ0ಯೋ ಅದೇ ಮಂಡಳಿತಯು ಅದೆ ಹೆಸರಿನಲ್ಲಿ ಶಾಲೆಯನ್ನು ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕು ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

14 ಸರಕಾರಿ ಆದೇಶ ಸಂಖ್ಯೆ: ಇಡಿ:28:ಪಿಜಿಸಿ:94 ದಿನಾಂಕ: 29–4–1994ರಂತೆ ಕನ್ನಡ ಅಥವಾ ಭಾಷೆ ಮಾಧ್ಯಮ ದಲ್ಲಿ ನಡೆಸಿ ಭಾಷೆ ನೀತಿಯನ್ನು ತಪ್ಪದೇ ಪಾಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಭಾಷಾ ನೀತಿಯ ಷರತ್ತಿಗೆ ಒಳಪಟ್ಟು ನೋಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು, ಸರಕಾರದ ಇಲಾಖೆಯ, ಕನ್ನಡ ಅಭಿವೃದ್ದಿ ಪ್ರಾದಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಗೆ ನೀಡಿರಿವ ನೋಂದನಿಯನ್ನು ರದ್ದು ಪಡಿಸಲಾಗುವುದು.

15 ಪ್ರತಿ ವರ್ಷವು ವಿಧ್ಯಾರ್ಥಿಗಳ ವ್ಯದ್ಯಕೀಯ ಪರಿಕ್ಷೇಯನ್ನು ನಿಯಮಾನುಸಾರ ಮಾಡಿಸತಕ್ಕದ್ದು

16 ಕರ್ನಾಟಕ ಸಮಗ್ರ ಶಿಕ್ಷಣ ಮಸುದೆ 1983 ಕರ್ನಾಟಕ ಆ್ಯಕ್ಟ1995 ಇದರಡಿಯಲ್ಲಿ ಬರುವ ಕಾಯ್ದ ಗಳನ್ನು ಹಾಗೂ ರಚಿಸಲಾದ ಮತ್ತು ಅನುಮೋದನೆಗೆ ರಚಿಸಲಾಗಿರುವ ನಿಯಮಗಳ ಸಂಬಂದಡಿಯಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲಾ ಷರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

17 ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂದಿಸಿದಂತೆ ನೋಂದಣಿಯಾಗಿರುವ ಶಾಲೆಗಳೆಲ್ಲವು ಸರ್ಕಾರದ ಅದಿಸೂಚನೆ ಅಡಿ ಸಂಖ್ಯೆ: ಇಡಿ:175:ಪಿ ಎಮ್‌ಸಿ:97 ದಿನಾಂಕ:26–012–1998 ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

18 ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ,ಸೇವಾ ಷರತ್ತು ಮತ್ತು ನಿಬಂದನೆಗಳು) ನಿಯಮ 99 ರ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

19 ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾಮಗಳನ್ನು ತಪ್ಪದೇ ಅಳವಡಿಸಿಕೋಳ್ಳಶಕ್ಕದ್ದು.

20 ಶಾಲೆಯನ್ನು ಪ್ರಾರಂಭಿಸಿದ ಎರಡು ತಿಂಗಳ ಅವದಿ0ಯೊಳಗೆ ಪ್ರಥಮ ಮಾನ್ಯತೆಗೆ ಸಂಭಂದಿಸಿದಂತೆ ಅರ್ಜಿಯನ್ನು ಸಲ್ಲಿಸತಕ್ಕದ್ದು ನಂತರ ಮನ್ಯತೆಯನ್ನು ಪ್ರತಿ ವರ್ಷ ನವೀಕರಿಸಕೊಳ್ಳತಕ್ಕದ್ದು.

21 ಅನುಮತಿ ನೀಡಿದ ಪ್ರತಿಯೊಂದು ತರಗತಿಗಳಲ್ಲಿ ಮಕ್ಕಳು ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

22 ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು .

23 ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದ 8ರ ಅಡಿಯಲ್ಲಿ ಉಪಭಂದ 36 ರಿಂದ 39 ರಂತೆ ನೊಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಷನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುತ್ತವೆ.

24 ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು .

25 ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ನೀರಿನ ವ್ಯವಸ್ಥೆ0ಯೊಂದಿಗೆ ಕಡ್ಡಾಯವಾಗಿ ಒದಗಿಸಿಕೊಡಬೇಕು ಮತ್ತು ಕುಡಿಯಲು ಶುದ್ಧ ನೀರನ್ನು ಒದಗಿಸಬೇಕು.

26 ಶಾಲೆಯಲ್ಲಿ ನೆಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಭೋಧಕ/ಭೋಧಕೇತರ ಸಿಬ್ಬಂದಿಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಸೇವಾ ಪುಸ್ತಕ ತೆಗೆದು ಅದರಲ್ಲಿ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಂಸಬೇಕು.

27 ಶಾಲೆಯನ್ನು ಪ್ರಾರಂಬಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾದಿಕಾರಿಗಳು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಯವರ ಜಂಟಿ ಖಾತೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಅಥವಾ ಅಂಚೆ ಕಚೇರಿಯಲ್ಲಿ ಇಡತಕ್ಕದ್ದು.

28 ಕರ್ನಾಟಕ ಶಿಕ್ಷಣ ಮಸೂದೆ ನಿಯಮಾವಳಿಗಳ ಪ್ರಕಾರ ಶಾಲೆಗೆ ಬೇಕಾಗಿರುವ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯ, ಪುಸ್ತಕಗಳು, ಆಟದ ಮೈಧಾನ, ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳು 1 ವರ್ಷದೊಳಗೆ ಒದಗಿಸಿಕೊಡತಕ್ಕದ್ದು ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

29 1997 ರ ಖಾಸಗಿ ಶಿಕ್ಷಣ ಸಂಸ್ಥೆಗಳ ವರ್ಗಿಕರಣ ಮತ್ತು ನೋಂದಣಿ ನಿಯಮಗಳ ನಿಯಮ 4,5 ಮತ್ತು 6 ರಂತೆ ಶಾಲಾ ಕಟ್ಟಡವು ಶಾಲಾ ಮಕ್ಕಳಿಗೆ ಹಾಗೂ ಸಿಬ್ಬಂದಿಗೆ ಸುಸಜ್ಜಿತವು ಹಾಗೂ ಬೆಂಕಿ ಮತ್ತು ಇನ್ನಿತರ ಅಪಾಯಗಳಿಂದ ಸುರಕ್ಷಿತವು ಆಗಿರಬೇಕು. ಈ ಕುರಿತು ಸಂಭಂಗಿಸಿದ ಅಧಿಕಾರಿಗಳಿಂದ ಕಟಡ ಸುರಕ್ಷಿತ ಪ್ರಮಾಣ ಪತ್ರವನ್ನು ಪಡೆದು 15 ದಿನಗಳಲ್ಲಿ ಹಾಜರು ಪಡಿಸತಕ್ಕದು.

30 ಶಾಲೆ ತೆರೆದ ಬಗ್ಗೆ ವಿಧ್ಯಾರ್ಥಿಗಳ ದಾಖಲಾತಿಯನ್ನು ಶಾಲೆಗೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೆ ತಿಸತಕ್ಕದು. ಒಂದು ವೇಳೆ ಶಾಲೆ ತೆಯುದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಆ ಆದೆಶ ರದ್ದಾಗುವುದು.

31 ಅನುಮತಿ ಇಲ್ಲದೆ ಇಗಾಗಲೇ ಶಾಲೆ ಪ್ರಾರಂಭಿಸಿದ್ದಲ್ಲಿ ಅದಕ್ಕೆ ಇಲಾಖೆ/ಈ ಕಚೇರಿ ಹೊಣೆಗಾರಿಕೆ ಇರುವದಿಲ್ಲ ಇದರಿಂದ ವಿಧ್ಯಾರ್ಥಿಗಳಿಗೆ ಯಾವುದೇ ಶೈಕ್ಷಣಿಕ ತೊಂದರೆ ಉದ್ಬವಿಸಿದಲ್ಲಿ ಹಾಗೂ ಈ ಕುರಿತು ಮುಂದಿನ ಯಾವುದೇ ಕ್ರಮಕ್ಕೆ ಕರ್ನಾಟಕ ಶಿಕ್ಷಣ ಕಾಯ್ದೆಯಂತೆ ಆಡಳಿತ ಮಂಡಳಿಯೇ ಸಂಪೂರ್ಣ ಜವಾಬ್ದಾರಿಯಾಗಿದೆ.

32 ಆರಟಿಇ ಕಾಯ್ದೆ 2012 ರನ್ವಯ ಸರ್ಕಾರದಿಂದ ಹೊರಡುವ ನಿಯಮ/ಸುತ್ತೋಲೆಗಳಂತೆ ಶಾಲೆಯಲ್ಲಿ ದಾಖಲಾತಿ ನಿಯಮಗಳನ್ನ ಪಾಲಿಸುವದು ಕಡ್ಡಾಯವಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿ
ಹುಕ್ಕೇರಿ

ಗೆ,
ಕಾರ್ಯದರ್ಶಿ /ಚೆಅರಮನ್
ಶ್ರೀ ಶಂಕರಲಿಂಗ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಚಿಕಾಲಗುಡ್ಡ ತಾಃ ಹುಕ್ಕೇರಿ
ಪ್ರತಿಯನ್ನು ಮಾನ್ಯ ಉಪನಿರ್ದೇಶಕರು ಸಾ.ಶಿ.ಇಲಾಖೆ ಇವರಿಗೆ ಸಲ್ಲಿಸಲಾಗಿದೆ